ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ ಕೆಲವು ಕಡೆ ಪೋ ರೂಮನ್ನು ಇಡುತ್ತೇವೆ. ನಾವು ಅಂದಾಜು ಮಾಡಿರುವಂತೆ ಒಂದು ಸ್ಕ್ವೇರ್‌ಫುಟ್‌ಗೆ ೨ ರಿಂದ ೨½ ರೂಪಾಯಿ ಸಿಗುತ್ತದೆ. ಎಲ್.ಐ.ಸಿ. ಯವರೂ ಬಾಡಿಗೆ ಕೊಡುತ್ತಾರೆ. ಎಲ್ಲಾ ವ್ಯವಹಾರ ಪೂರ್ತಿಯಾದ ಮೇಲೆ ಬಾಡಿಗೆ ನಿಷ್ಕರ್ಷೆ ಮಾಡುತ್ತೇವೆ. ಏಕೆಂದರೆ ಅಲ್ಲಿನ ನೆಲದ ಬೆಲೆಯನ್ನು ಕೂಡ ನಾವು ನಿಷ್ಕರ್ಷೆ ಮಾಡಬೇಕು. ಆದರ ಬೆಲೆ ನಿಷ್ಕರ್ಷೆಯಾದ ಮೇಲೆ ಆಂತಿಮವಾಗಿ ೧೦ ಪರ್ಸೆಂಟ್ ಹಣವನ್ನು ಕೊಡಬೇಕು. ನಂತರ ಬೆಲೆ ಕಟ್ಟಿ ವಜಾ ಹಾಕಿಕೊಳ್ಳಬೇಕಾದ ಹಣ ವಜಾ ಹಾಕಿಕೊಂಡು ಕೊನೆಯಲ್ಲಿ ಎಷ್ಟು ಬಾಕಿ ಬರುತ್ತದೆಂಬುದನ್ನು ನಿರ್ಧಾರ ಮಾಡುತ್ತೇವೆ.

SRI ABDUL LATHEEF.—Sir, this item was not budgeted during the last year. What provision has been made to purchase this building at huge amount and if borrowed, what will be the amount of interest that is to be paid by the Government ?

ಶ್ರೀ ಕಾಗೋಡು ತಿಮ್ಮಪ್ಪ.—ಪ್ರಾರಂಭದಲ್ಲಿ ಅವರಿಗೆ ಶೇಕಡ ೧೦ರಷ್ಟು ಹಣವನ್ನು ನಗದಾಗಿ ಕೊಡಬೇಕು. ಉಳಿದ ಹಣವನ್ನು ೨೦ ಕಂತುಗಳಲ್ಲಿ ಶೇಕಡ ಪತ್ಯೂವರೆ ಬಡ್ಡಿ ದರದಲ್ಲಿ ವಾಪಸ್ ಕೊಡಬೇಕು.

ಶ್ರೀ ಎಂ. ಸಿ. ನಾಣಯ್ಯ.—ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾ ಒಂದು ಭಾಗದಲ್ಲಿ ಪೋ ರೂಂ ಇಡುತ್ತೇವೆಂದು ಹೇಳಿದರು ಪೋ ರೂಮ್‌ನಲ್ಲಿ ಯಾರನ್ನು ಇಡುತ್ತೀರಿ ಎಂಬುದು ಮೊದಲನೇ ಪ್ರಶ್ನೆ. ಇನ್ನೊಂದು ಪ್ರಶ್ನೆ ಆ ಕಟ್ಟಡ ಕಟ್ಟುವುದಕ್ಕೆ ಎಸ್.ಆರ್. ರೇಟ್ಸ್ ಪ್ರಕಾರ Cost of index ಎಷ್ಟಾಗುತ್ತದೆ ಎಂಬುದನ್ನು ವಿಮರ್ಶೆ ಮಾಡಿದ್ದೀರಾ ? ಮೊದಲನೆಯದಾಗಿ ಪೋ ರೂಂನಲ್ಲಿ ಯಾರನ್ನು ಇಡುತ್ತೀರಿ ಎಂಬುದನ್ನು ಹೇಳಿ, ಎರಡನೆಯದಾಗಿ ಇವತ್ತಿನ ಎಸ್.ಆರ್. ರೇಟ್ಸ್ ಪ್ರಕಾರ ಬಿಲ್ಡಿಂಗಿಗೆ ಎಷ್ಟು ಆಗುತ್ತದೆ ಎಂಬುದನ್ನು ವಿಮರ್ಶೆ ಮಾಡಿದ್ದೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಇವತ್ತು ವಿಮರ್ಶೆ ಮಾಡಬೇಕಾದ ಅಗತ್ಯ ಇಲ್ಲ. ಖರೀದಿ ಮಾಡ ತಕ್ಕ ಕಾಲದಲ್ಲಿ ಲಾಭದಾಯಕವಾಗಿದೆ ಎಂಬ ದೃಷ್ಟಿಯಿಂದಲೇ ಮಾಡಿದ್ದೇವೆ.

Expenditure on Government Vehicles in Sericulture Department.

205. SRI G. RAJU GOWDA (Hanur).—Will the Minister for Small Scale Industries and Sericulture, be pleased to state :—

(a) the number of vehicles being used in the Sericulture department of the State ;

(b) the amount spent on these vehicles for maintenance and petrol by the Government (for one year only) ;

(c) the amount spent so far by this department for non-productive programme since 1974 ?

SMT. RENUKA RAJENDRAN (Minister for Small Scale Industries and Sericulture).—

(a) 126

(b) Rs. 11,72,520-30 (from 1-4-1979 to 31-3-1980).

(c) All expenses are essential. It is difficult to specify the non-productive item of expenditure.

ಶ್ರೀ ಜಿ. ರಾಜುಗೌಡ.—ಮಾನ್ಯ ಅಧ್ಯಕ್ಷರೇ, ಕೆಲಸದ ಒತ್ತಡ ಇಲ್ಲದಿದ್ದರೂ ಭಾರಿ ಸಂಖ್ಯೆಯ ವಾಹನಗಳನ್ನು ಬಳಕೆಗೆ ತಂದು ರೇಷ್ಮೆ ಇಲಾಖೆಯಲ್ಲಿ ದುಂದು ವೆಚ್ಚಕ್ಕೆ ಅನುವು ಮಾಡಿಕೊಟ್ಟಿದ್ದಾರೆ ಎಂಬ ಕೂಗು ಎಲ್ಲೆಲ್ಲೂ ಕೇಳಿಬರುತ್ತಿದೆ. ಈ ಆರೋಪದಿಂದ ಮುಕ್ತ ಪಡೆಯಲು ಏನು ಮಾಡುತ್ತೀರಿ ? ರೇಷ್ಮೆ ಇಲಾಖೆಯಲ್ಲಿ ಬಳಸುತ್ತಿರುವ ವಾಹನಗಳಿಂದ ೧೧,೭೨,೫೨೦ ರೂಪಾಯಿ ಖರ್ಚಾಗಿದೆ ಎಂದು ಹೇಳುತ್ತಿದ್ದೀರಿ. ವಾಹನ ಪಾಲನೆಗೆ ಎಷ್ಟು ಖರ್ಚಾಗಿದೆ ಮತ್ತು ಆದರ ತೈಲಕ್ಕೆ ಎಷ್ಟು ಖರ್ಚಾಗಿದೆ ಎಂಬುದನ್ನು ದಯಮಾಡಿ ತಿಳಿಸಿ.

ಶ್ರೀಮತಿ ರೇಣುಕಾ ರಾಜೇಂದ್ರನ್.—ಉಪಯೋಗವಿಲ್ಲದೆ, ಸಂದರ್ಭೋಚಿತವಾಗಿ ವಾಹನಗಳನ್ನು ಬಳಸದೇ ವಿನಾಕಾರಣ ಬಳಕೆ ಮಾಡಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅಂಥ ಪ್ರಕರಣ ಯಾವುದೂ ನನ್ನ ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರೂ ಇಂಥ ಪ್ರಕರಣವನ್ನು ನನ್ನ ಗಮನಕ್ಕೆ ತಂದಿಲ್ಲ. ಯಾವುದೂ ದುಂದು ವೆಚ್ಚ ಮಾಡಿಲ್ಲವೆಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. ಮೈಂಟಿನೆನ್ಸ್‌ಗೆ ಎಷ್ಟು ಖರ್ಚಾಗಿದೆ ಎಂದು ಕೇಳಿದ್ದಾರೆ. ಆ ಬಗ್ಗೆ ಹೇಳಬೇಕೆಂದರೆ ೪,೮೫,೯೨೯ ರೂಪಾಯಿ ೪೦ ಪೈಸೆ ಖರ್ಚಾಗಿದೆ.

ಶ್ರೀ ಮಳ್ಳೂರು ಆನಂದರಾವ್.—ನಮ್ಮ ರಾಜ್ಯದಲ್ಲಿ ಕೆಲವು ಜಿಲ್ಲೆಗಳಲ್ಲಿ ಮಾತ್ರ ರೇಷ್ಮೆ ಉದ್ಯಮ ಇದೆ. ಅಂಥದ್ದರಲ್ಲಿ ೧೧,೭೨,೫೨೦ ರೂಪಾಯಿಗಳನ್ನು ವಾಹನಗಳಿಗಾಗಿ ಏತಕ್ಕೆ ಖರ್ಚು ಮಾಡಿದ್ದಾರೆ ? ಅಂಥ ಕೇಸು ಏನು ಮಾಡಿದ್ದಾರೆ ? ೧೨೮ ವಾಹನಗಳನ್ನು ಉಪಯೋಗಿಸಿಕೊಂಡು ಏನು ಕೆಲಸ ಮಾಡುತ್ತಾರೆ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ನಿಮಗೆ ರೇಷ್ಮೆ ಅನುಭವವಿಲ್ಲ ಬಿಡಿ.

ಶ್ರೀ ಮಳ್ಳೂರು ಆನಂದರಾವ್.—ನಾನು ರೇಷ್ಮೆ ಹುಳು ಸಾಕುತ್ತೇನೆ.

ಅಧ್ಯಕ್ಷರು.—ಇವರು ರೇಷ್ಮೆ ಬೆಳೆಯುವ ಕಡೆ ಅಳಿಯಂದಿರು.

ಶ್ರೀಮತಿ ರೇಣುಕಾ ರಾಜೇಂದ್ರನ್.—ನಮ್ಮಲ್ಲಿ ಸಾಕಷ್ಟು ಫಾರಂಗಳಿವೆ. ಚಾಕಿ ಸಾಕಾಣಿಕೆ ಕೇಂದ್ರವನ್ನು ಗ್ರಾಮಾಣ ಪ್ರದೇಶದಲ್ಲಿ ತೆರೆದಿದ್ದೇವೆ. ಗೂಡನ್ನು ತೆಗೆದುಕೊಂಡು ಹೋಗುವುದಕ್ಕೆ ಉಪಯೋಗಿಸಬೇಕಾಗುತ್ತದೆ. ರೈತರಿಗೆ ತಾಂತ್ರಿಕ ನೆರವನ್ನು ಕೊಡುವುದಕ್ಕೆ ಅಧಿಕಾರಿಗಳನ್ನು ವಾಹನ ಗಳಲ್ಲಿ ಕಳುಹಿಸಿಕೊಡಬೇಕಾಗುತ್ತದೆ. ಇದಕ್ಕೆಲ್ಲಾ ವಾಹನ ಬಳಕೆಯಾಗುತ್ತದೆ. ಮಾನ್ಯ ಸದಸ್ಯರುಗಳು ಇದನ್ನು ಸದುಪಯೋಗವಾಗುತ್ತಿಲ್ಲ ಎಂದು ಯಾವ ಅರ್ಥದಲ್ಲಿ ಹೇಳುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ವಾಹನವಿಲ್ಲದೆ ಎಲ್ಲರೂ ನಡೆದುಕೊಂಡು ಹೋಗಬೇಕು ಎಂದು ಹೇಳುತ್ತಿದ್ದೀರೋ ಹೇಗೆ ?

ಶ್ರೀ ಬಿ. ವಿ. ಕಕ್ಕಿಲಾಯ.—೧೧,೭೨,೫೨೦ ರೂಪಾಯಿ ೧ನೇ ಏಪ್ರಿಲ್ ೧೯೭೯ ರಿಂದ ೩೧ನೇ ಮಾರ್ಚಿ ೧೯೮೦ರವರೆಗೆ ವಾಹನಗಳಿಗಾಗಿ ಖರ್ಚು ಮಾಡಲಾಗುತ್ತಿದೆ ಎಂದು ಹೇಳಿದ್ದಾರೆ. ಅಂದರೆ ಸುಮಾರು ೧೨ ಲಕ್ಷ ರೂಪಾಯಿಗಳನ್ನು ೧೨೬ ವಾಹನಗಳಿಗೆ ಖರ್ಚು ಮಾಡುತ್ತಿದ್ದಾರೆ. ಹಾಗಾದರೆ ಒಂದು ವಾಹನಕ್ಕೆ ೧೦ ಸಾವಿರ ರೂಪಾಯಿ ಖರ್ಚು ಮಾಡುತ್ತೀರಿ. ಇಷ್ಟು ಖರ್ಚು ಯಾವ ರೀತಿ ಆಗುತ್ತದೋ ನನಗೆ ಅರ್ಥವಾಗುವುದಿಲ್ಲ. ಒಂದು ವಾಹನಕ್ಕೆ ಇಷ್ಟು ಹಣ ಹೇಗೆ ಖರ್ಚಾಗುತ್ತದೆ ? ಇದು ನಿಜವಾಗಿ ಉಪಯುಕ್ತವಾದ ರೀತಿಯಲ್ಲಿ ಖರ್ಚಾಗುತ್ತಿದೆಯೇ ? ಇದರಲ್ಲಿ ಉತ್ಪಾದನೆಗೆ ಸಹಾಯಕ ವಾಗುವ ರೀತಿಯಲ್ಲಿ ಎಷ್ಟು ಹಣ ಖರ್ಚಾಗಿದೆ ಮತ್ತು ಅನುತ್ಪಾದಿತ ರೀತಿಯಲ್ಲಿ ಎಷ್ಟು ಹಣ ಖರ್ಚಾಗಿದೆ ಎಂದು ಪ್ರಶ್ನೆ ಕೇಳಿದ್ದಾರೆ. ಆದರೆ ಆ ಪ್ರಶ್ನೆಗೆ ಸರಿಯಾದ ಉತ್ತರವನ್ನು ಕೊಟ್ಟಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಈಗಲಾದರೂ ಸರಿಯಾದ ಉತ್ತರವನ್ನು ಕೊಡುತ್ತಾರೆಯೇ ?

ಶ್ರೀಮತಿ ರೇಣುಕಾ ರಾಜೇಂದ್ರನ್.—ಉತ್ಪಾದನಾರಹಿತ ವೆಚ್ಚ ಎಂಬ ಮಾತನ್ನು ನಾನು ಒಪ್ಪುವುದಿಲ್ಲ. ನಮ್ಮ ಇಲಾಖೆಯಲ್ಲಿ ಫೀಲ್ಡ್ ವರ್ಕ್ ಮಾಡಬೇಕಾದರೆ ಕೃಷಿ ಇಲಾಖೆಯವರು ಹೇಗೆ ಮಾಡುತ್ತಾರೋ ಅದೇ ರೀತಿ ನಾವೂ ಮಾಡಬೇಕಾಗುತ್ತದೆ ಇದೆಲ್ಲಾ ಉತ್ಪಾದನಾರಹಿತ ವೆಚ್ಚವಾಗುವುದಿಲ್ಲ ಎಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. ವಾಹನಗಳ ರಿಪೇರಿಗಾಗಿ ೧೨ ಲಕ್ಷ ರೂಪಾಯಿ ಖರ್ಚು ಮಾಡುತ್ತಿರುವುದು ಎಲ್ಲಾ ಜಿಲ್ಲೆಗೂ ಸೇರಿದೆ ಎಂಬ ವಿಷಯವನ್ನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಸಿದ್ಧಮಾದಯ್ಯ. ತಾವು ಕೊಟ್ಟಿರುವ ಉತ್ತರದಲ್ಲಿ ೧೨೬ ವಾಹನಗಳನ್ನು ಇಲಾಖೆಯಲ್ಲಿ ಬಳಸಲಾಗುತ್ತಿದೆ ಎಂದು ಹೇಳಿದ್ದೀರಿ. ಮೊದಲು ಈ ಇಲಾಖೆಯಲ್ಲಿ ಇಷ್ಟು ವಾಹನಗಳು ಇರಲಿಲ್ಲ. ಇಲಾಖೆಯವರು ಸಲಹೆ ಕೊಟ್ಟರು ಎಂದು ಅದರ ಮೇರೆಗೆ ಇಷ್ಟು ವಾಹನಗಳನ್ನು ಕೊಂಡುಕೊಂಡರು. ಈ ವಾಹನಗಳಿಗಾಗಿ ೧೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದು ಅವಶ್ಯಕ ಎಂದು ಮಂತ್ರಿಗಳೂ ಹೇಳುತ್ತಿದ್ದಾರೆ. ಇಷ್ಟೊಂದು ವಾಹನಗಳು ಅವಶ್ಯಕವಿಲ್ಲ ಎಂದು ನನಗನ್ನಿಸುತ್ತಿದೆ. ಆದ್ದರಿಂದ ಈ ಖರ್ಚನ್ನು ತಗ್ಗಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ? ವಿಶ್ವಬ್ಯಾಂಕಿನಿಂದ ಸಾಲ ಬೇರೆ ತೆಗೆದುಕೊಂಡು ಬಂದಿರುವುದರಿಂದ ಅನಾವಶ್ಯಕವಾಗಿ ಆಗುತ್ತಿರುವ ಖರ್ಚನ್ನು ಕಡಿಮೆ ಮಾಡಿ ನಮ್ಮ ಸರ್ಕಾರದ ಬೊಕ್ಕಸಕ್ಕೆ ಹೆಚ್ಚು ಹಣ ಬರುವಂತೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀಮತಿ ರೇಣುಕಾ ರಾಜೇಂದ್ರನ್.—ಮಾನ್ಯ ಸದಸ್ಯರು ಹೇಳಿದ ಪ್ರಕಾರ ಈ ವೆಚ್ಚವನ್ನು ಕಡಿಮೆ ಮಾಡುವುದಕ್ಕಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಎಕ್ವಿಪ್‌ಮೆಂಟ್ ತರುವುದಕ್ಕೆ, ಪೆಟ್ರಿಸೈಡ್ಸ್ ತರುವುದಕ್ಕೆ, ರೇಷ್ಮೆ ಗೂಡನ್ನು ಸಾಗಿಸುವುದಕ್ಕೆ ನಾಲ್ಕೈದು ಮಂದಿ ವಾಹನದಲ್ಲಿ ಹೋಗಲೇಬೇಕು. ಒಬ್ಬರು ಇದಕ್ಕೆಲ್ಲಾ ಓಡಾಡುವುದಕ್ಕೆ ಆಗುವುದಿಲ್ಲ. ಸೀರಿಕಲ್ಚರ್ ಡೆಮಾನ್‌ಸ್ಟ್ರೇಟರ್‌ಗಳಿಗೆ ಮೋಟರ್‌ಬೈಕ್ ಕೊಟ್ಟು ಫೀಲ್ಡ್ ವರ್ಕ್ ಮಾಡಿಸಬೇಕೆಂಬ ಯೋಚನೆಯೂ ಇದೆ.

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ತಾವೇ ನೋಡಿ ಖರ್ಚು ಮಾಡಿರುವುದು ಸರಿಯಿದೆಯೇ ? ಇಷ್ಟು ವಾಹನಗಳು ಅನಗತ್ಯ, ಈ ವಿಚಾರದಲ್ಲಿ ತಾವು ಕೂಲಂಕುಷವಾಗಿ ತನಿಖೆ ಮಾಡಿ ಹೇಳಿಕೆ ಕೊಡುತ್ತೀರಾ ?

ಶ್ರೀಮತಿ ರೇಣುಕಾ ರಾಜೇಂದ್ರನ್.—ಸ್ವಾಮಿ, ಸಂಖ್ಯೆಗಳನ್ನು ನೋಡಿದ ಮೇಲೆ ನನಗೂ ಕೂಡ ಸಂಶಯ ಉಂಟಾಯಿತು. ಮೆಂಟಿಯಿನ್ಸ್‌ಗೆ ಹಣ ಖರ್ಚಾಗಿದೆ. ಇತರೆ ಇಲಾಖೆಗಳಲ್ಲಿದ್ದಂತೆ ಟೆಂಡರ್ ಕರೆದು ಟೆಕ್ನಿಕಲ್ ಆಫೀಸರ್ ಯಾರಿರುತ್ತಾರೆ, ಅವರು ಇದನ್ನು ನೋಡಿಕೊಳ್ಳುತ್ತಾರೆ. ವೆಚ್ಚ ಸಾಕಷ್ಟು ತಗಲಿದೆ. ಇವತ್ತು ತಮಗೆ ಗೊತ್ತಿದ್ದಂತೆ ಟೈರುಗಳು ಬೆಲೆ ಜಾಸ್ತಿಯಾಗಿದೆ. ಬೇರೆ ಇಲಾಖೆಗಳಲ್ಲಿ ಏನು ವ್ಯವಸ್ಥೆಯಿದೆಯೋ, ಅದೇ ವ್ಯವಸ್ಥೆ ನನ್ನ ಇಲಾಖೆಯಲ್ಲಿಯೂ ಇದೆ.

ಶ್ರೀ ಕೆ.ಬಿ. ಶಿವಯ್ಯ.—ಇಲಾಖೆಯ ವಾಹನಗಳನ್ನು ಯಾವ ಉದ್ದೇಶಗಳಿಗಾಗಿ ಮೀಸಲಾಗಿ ಟ್ಟಿರ್ತೋ ಅದಕ್ಕಲ್ಲದೇ, ಬೇರೆ ಬೇರೆ ಸ್ವಂತ ಕೆಲಸಗಳಿಗೂ ಉಪಯೋಗಿಸುವುದರಿಂದ ದುರುಪಯೋಗ ವಾಗಿದೆ. ಅದಕ್ಕೋಸ್ಕರ ಇಷ್ಟು ಖರ್ಚಾಗಿದೆಯೆಂದು ನಮಗೆ ತಿಳಿದು ಬಂದಿದೆ, ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ?

ಶ್ರೀಮತಿ ರೇಣುಕಾ ರಾಜೇಂದ್ರನ್.—ಆ ರೀತಿ ಏನೂ ಆಗಿಲ್ಲ.

SRI M. ABDUL LATHEEF.—The maintenance cost has gone up on account of very hectic campaign that was carried by the department. May I know the cost of the fuel that was spent on the activities of this campaign ?

SMT. RENUKA RAJENDRAN.—If the hon'ble Member puts a separate question, I can get the answer.

ಶ್ರೀ ರಾಜುಗೌಡ —ತಾವು ಇಲಾಖೆಯಲ್ಲಿ ದಕ್ಷತೆಯನ್ನು ಮಾಡಿಸಿದ್ದೇನೆ, ಪ್ರಗತಿಯನ್ನು ಸಾಧಿಸಿದ್ದೇನೆಂದು ತಾವು ಹೇಳಿದಿರಿ, ಕಡಿಮೆ ವಾಹನಗಳನ್ನು ಬಳಸಿ ಈ ಕೆಲಸವನ್ನು ಮಾಡಬಹುದಾಗಿತ್ತು. ಏನು ತಾವು ಉತ್ಪನ್ನರಹಿತ ಬಾಬುಗಳಿಗೆ ವೆಚ್ಚ ಮಾಡಿದ್ದೀರಿ ? ಅದು ಸಕಾರಣವಾಗಿದೆಯೇ ? ಬಹು ಅಂತಸ್ಥಿನ ಮಹಡಿಯಲ್ಲಿ ತಮ್ಮ ಇಲಾಖೆಯ ಕಚೇರಿ ಇದೆ. ನಿರ್ದೇಶಕರ ಕಚೇರಿಯಲ್ಲಿ ಉಪಯೋಗಿಸಿರ ತಕ್ಕ ರತ್ನಗಂಬಳಿ ಯಾವ ರಾಜಮಹಾರಾಜರುಗಳಲ್ಲಿ ಇರಲಿಲ್ಲವೆಂದು ಹೇಳಬಹುದು. ಆಲ್ಲಿರತಕ್ಕ ಪೀಠೋಪಕರಣಗಳು, ಹವಾನಿಯಂತ್ರಿತ ಕೋಣೆಗೆ ಖರ್ಚು ಮಾಡಿರತಕ್ಕ ವೆಚ್ಚ ಉತ್ಪನ್ನರಹಿತವಲ್ಲವೆ ? ಇದು ತಮ್ಮ ಗಮನಕ್ಕೆ ಬಂದಿದೆಯೇ ? ಇಂಥ ವೆಚ್ಚವನ್ನು ಕಡಿಮೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀಮತಿ ರೇಣುಕಾ ರಾಜೇಂದ್ರನ್.—ಇದು ವಾಹನಕ್ಕೆ ಸಂಬಂಧಪಟ್ಟ ಪ್ರಶ್ನೆಯಲ್ಲ.